# Annexure - B

CERTIFICATE OF LAND

File No. LGL/CR/80/2000-01 Date: 29/09/26

Certified that the land measuring 1,74,014·80 Sq. m is owned by the President of KLE Society by way of Sale deed (In case of allotment of land, if it is not perpetual, periodicity of allotment to be mentioned from - to - .

It is further certified that owner of the land has leased the said land to KLE School Kotagondhunasi (Name of the School/Society/Trust/Company under Section 8 of companies Act, 2013) fully described in the schedule mentioned hereinafter with the following details for a period of - years from - to -

| Sl. | Particulars | Details |
|---|---|---|
| 1 | Plot No. (s)/ Survey No. (s)/Khasra No. (s)/Khata. No.(s)/Khatauni No.(s) | 186, 183 |
| 2 | Name of street/village, Sub Division, District and State | Kotagondhunasi village, Hubli rural, Taluka Dharwad [Dist] Karnataka 580028 |

It is certified that the said entire land comprise of a single contiguous plot of land. It is further certified that KLE School Kotagondhunasi (Name of the School with name of street, village, sub-division and district) run by name of KLE Society (Society / Trust /Company under Section 8 of companies Act, 2013) is located on the said plot of land.

**THE SCHEDULED OF LAND ABOVE REFERRED TO**

All that piece and parcel of land measuring 6,105·75 sq m situated in (area of land in square meters) [Plot No. (s)/Survey No. (5)/ Khasra No. (s)] at Kotagondhunasi (name of street/village, sub division, district and state) and bounded as follows:

**North** : Survey No. 170, 171, 185, 184
**East** : Road adjacent with survey No. 179, 180, 181
**West** : Survey No. 146, 187, 188
**South** : Budarasingi village border

DM/ADM/SDM/ TEHSILDAR/NAIB TEHSILDAR/ REGISTRAR/ SUB REGISTRAR/EQUIVALENT LAND AUTHORITY

(Stamp and Signature of the land authority)
SENIOR SUB REGISTRAR
HUBLI (NORTH)
(Name of Officer)

(Name of District)

(K.S Hanchinal)

The filled up certificate should be either in Hindi or English. If it is issued in vernacular language, translated notarized version in English be uploaded along with the original vernacular certificate as a single pdf.

PRINCIPAL,
K.L.E. SCHOOL, KOTGONDHUNSHI.
POST: ADARGUNCHI, HUBBALLI-580028

SECRETARY
Board of Management
K.L.E. Society, BELAGAVI

**KARNATAKA GOVERNMENT**

No: LGL/CR/80/2000-01

Deputy Commissioner's Office
Dharwad, Dated: 22-11-2007

Subject: Hubballi Taluka Kotagondahunasi Village R.S. No. 183 and 186 Sanjay Co.Operative Spinning Mill Limited's actual ownership land, Belagavi K.L.E. Society's regarding approval.

Read:

1. Government Order No: R.D./21/L.G.D/83 dated 30-10-1984.

2. Approved grant of the land order bearing No. L.N.D/CR/175/81-82 dated 12-01-1988.

3. Government Revenue Department Letter No: R.D./109/L.G.D/2006 dated 15-02-2007 under Government Co.Operative Department proceedings dated 25-11-2006

4. This office proceedings letter No: L.G.L/CR/80/2001-02 dated 12-04-2007.

5. Government Letter No: KoE/109/L.G.D/2006 dated 10-09-2007.

6. which is of primary importance Government K.L.R. Rules 1969, sub rules 27 Authority.

**Introduction:**

As per the Government Revenue Department Reference 1 order and this office reference No. 2's order, Hubballi Taluka Kotagundahunashi village R.S. No. 186 (20 Acres) and R.S. No. 183 (13 A+10A=23A) in which total 43 Acres measuring land the President of Sanjay Co.Operative Spinning Mill Ltd., Hubballi, the land has been sanctioned subject to various conditions—including the stipulation that the proposed land must be utilized for the sanctioned industrial purpose within two years from the date of taking possession—as specified in the order. The government gave the said 43 acres of land to the society, it is almost 20 years period and as per the agreed land conditions, the said land is not used for the purpose it was allotted. In this regard the society management board, dated 12-06-2006 arranged for a meeting. The land held by the society, the Belagavi K.L.E. Society Education and Health Education purpose of handing over the said land, a resolution was passed. The President of Sanjay Co-Operative Spinning Mill Ld., Hubballi has violated the conditions. Hence, the President of Sanjay Co-Operative Spinning Mil Ltd., Hubballi as per the office work activity and about the institution, with regard to the land measuring 43 acres to be transferred in the name of K.L.E. Society, was discussed with the Secretary of the Government Department dated 25-11-2006 in the presence of the members Sanjay Co-Operative Spinning Mill Ltd., Hubballi the 43 acre land which was under its ownership a proposal for sanction of disposal was given to the Revenue Department and a resolution has been

P. S. SIDDESHPANDE
ADVOCATE
NOTARY GOVT. OF INDIA

Ushari K
PRINCIPAL,
K.L.E. SCHOOL, KOTGONDHUNSHI.
POST: ADARGUNCHI, HUBBALLI-580028

SECRETARY
Board of Manageme...
K.L.E. Society, BELAG...

adopted to take action in accordance with law. In this direction K.L.E. Society, Preisdent Shri. Prabakhar Kore, M.L.C., he in Hubballi Kotagondahunsi R.S. No. 183 and 146, the 43 Acres Land which is in the physical possession of Sanjay Co-Operative Spinning Mill Ltd., Hubballi, requested for education and Health Education purpose gave a proposal to the Chief Minister of Government of Karnataka, Bengaluru, dated 01-02-2007. The said land of Sanjay Co-Operative Spinning Mill Ltd., which is in their possession came to be known on perusal of the Record of Rights (RTC).

With this regard, Hubballi's Sanjay Co-Operative Spinning Mill Ltd., the land which is in its possession as per the orders and the as per the conditions with two years the Spinning Mill should start its activities, but since for the last 20 years, no work activity is started in the said land as per the agreed conditions and has violated the same, the Government Co.Operative Department the office bearers meeting was called and it was decided by the said office bearers dated 12-04-2007 as per the letter given to the Revenue Department detailed report was submitted.

The Government after considering the proposal, above read Sl. No. 5 letter the government and this office dated 12.01.1988, Sanjay Co.Operative Spinning Mill Ltd., Hubballi had given permission to allot 43 Aces of land in the year 1983-84 to start the working activities, but due to some inevitable conditions have not fulfilled and hence the Revenue Department Office is taking back all the land situated at Hubballi Taluk, Kotagondahunasi Village, bearing R.S. No. 183 and 146, 43 acres of land out of which 34 acres of land to Belagavi K.L.E. Society for Education and Health Education purpose on the market rate, and other fees and as per Karnataka Land Reform Rules 1969 and sub rules 27 exercising the authority vested in the Government, prior approval was granted to sanction 9 acres of land within the limits of Adargunchi Village Panchayat for the general public purpose it was agreed by putting a condition that this land should not be given to any private institution. Taking into consideration the prior approval of the Government, the following order is issued:

## ORDER

As per the Circumstances explained in the proposal Hubballi Taluk, Kotagondahunasi Village R.S. No. 183 and 186 measuring 43 acres od land as per Read Sl. No. 1 and 2 on the basis, the President Sanjay Co-Operative Spinning Mill Limited, Hubballi, approved and ordered that the Spinning Mill since 1983-83 till now have not commenced any activity. Hence the Revenue Department has ordered to return the entire and of 43 acres and in which 34 acres of land is given to Belagavi K.L.E. Society Education and Health Education purpose on the following conditions is approved and ordered. The entire survey Numbers remaining part of 9 acres of land which is within the limits of Adargunchi Panchayat Village it is ordered that it will be held back for general public use and under the condition that it will not be given to any Private institution.

PRINCIPAL,
K.L.E. SCHOOL, KOTGONDHUNSHI.
POST: ADARGUNCHI, HUBBALLI-580028

NOTARY GOVT. OF INDIA
P. S. SIRDESHPANDE

SECRETARY
Board of Management
K.L.E. Society, BELAGAVI

**CONDITIONS:**

1. The applicant organization who has got the approval as per the market rate it is sold for Rs. 2.00 Lakh per acre 68.00 Lakh Rs. Should be paid within two months to the Government and the copy of the challan should be submitted before the Tahasildar Hubballi.

2. Sanjay Co-operative Spinning Mills Ltd., Hubballi will give a bank guarantee for the settlement of any financial obligations arising from pending court cases, verdicts, or any other matters to the government or shareholders.

3. The sanctioned land must be utilized for the purpose of the grant within three years from the date of taking possession, and construction work must be undertaken in accordance with the approved plan.

4. The sanctioned land for 15 years must not be alienated. If wants to alienate or transfer then the prior permission from the Deputy Commissioner should be obtained (Rule-9).

5. The applicant organization approve land must be utilized in accordance with the rules and subject to the laws governing the relevant local authorities. (Rule-18-C).

6. The application organization must take possession of the sanctioned land within three months. You should erect a wire fence around the land and secure it to prevent encroachment. The government in any way shall not be responsible or liable for the encroachment.

7. The Deputy Commissioner holds the authority to modify or add conditions, in accordance with the directions issued by the government from time to time. The Deputy Commissioner shall have the power to reclaim the sanctioned land if the government so desires. No compensation will be paid in this regard

8. The allottee after receiving the sanctioned letter from the authorities with regard to agreeing to all the conditions mentioned above as per Rule 28 (2) as per Form 6 will execute a consent letter before the Tahasildar within two months

9. The allottee must identify the boundaries of the allotted land and obtain possession from the Tahsildar.

10. Action must be taken to enter the name of the grantee in the Record of Rights (Pahani) in accordance with the orders, following all the procedures mentioned above.

PRINCIPAL,
K.L.E. SCHOOL, KOTGONDHUNSHI.
POST: ADARGUNCHI, HUBBALLI-580028

NOTARY GOVT. OF INDIA
P. S. SIROSHPANCE
ADVOCATE
HUBBALLI

SECRETARY
Board of Management
K.L.E. Society, BELAGAVI

**ಕರ್ನಾಟಕ ಸರಕಾರ**

ಕ್ರ LGL/CR/80/2000-01

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಧಾರವಾಡ ದಿನಾಂಕ೩೨-11-2007

ವಿಷಯ:- ಹುಬ್ಬಳ್ಳಿ ತಾಲೂಕಾ ಕೊಟಗೊಂಡಹುಣಶಿ ಗ್ರಾಮದ ರಿ.ಸ.ನಂ. 183 ಹಾಗೂ 186 ರಲ್ಲಿಯ ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಒಡೆತನದ ಜಮೀನನ್ನು ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಗೆ ಮಂಜೂರು ಮಾಡುವ ಕುರಿತು.

ಓದಿದೆ:-
1. ಸರಕಾರದ ಆದೇಶ ಕ್ರ ಆರ್.ಡಿ/21/ಎಲ್.ಜಿ.ಡಿ/83 ದಿನಾಂಕ 30-10-1984.
2. ಈ ಕಾರ್ಯಾಲಯದ ಜಮೀನು ಮಂಜೂರಾತಿ ಆದೇಶ ಕ್ರ ಎಲ್.ಎನ್.ಡಿ/ಸಿಆರ್/175/81-82 ದಿನಾಂಕ 12-01-1988.
3. ಸರಕಾರದ ಕಂದಾಯ ಇಲಾಖೆಯ ಪತ್ರ ಕ್ರ ಆರ್.ಡಿ/109/ಎಲ್.ಜಿ.ಡಿ/2006 ದಿನಾಂಕ 15-02-2007 ನೇದ್ದರ ಅಡಿಯಲ್ಲಿಯ ಸರಕಾರದ ಸಹಕಾರ ಇಲಾಖೆಯ ನಡುವಳಿಗಳು ದಿನಾಂಕ 25-11-2006 ನೇದ್ದು.
4. ಈ ಕಾರ್ಯಾಲಯದ ಇದೇ ಸಮಸಂಖ್ಯೆಯ ಪತ್ರ ಕ್ರ ಎಲ್.ಜಿ.ಎಲ್/ಸಿಆರ್/80/2001-02 ದಿನಾಂಕ 12-04-2007.
5. ಸರಕಾರದ ಪತ್ರ ಕ್ರ ಕಂಇ/109/ಎಲ್.ಜಿ.ಡಿ/2006 ದಿನಾಂಕ 10-09-2007.
6. ಸರಕಾರಕ್ಕೆ ಪ್ರದತ್ತವಾಗಿರುವ ಕ.ಭೂ.ಕಂ. ನಿಯಮಾವಳಿಗಳು 1969 ಉಪನಿಯಮ 27 ರಲ್ಲಿಯ ಅಧಿಕಾರ.

OFFICE OF THE
KLE SOCIETY BELGAUM
27 NOV 2007
Inward No. 118೩6

**ಪ್ರಸ್ತಾವನೆ:-**

ಸರಕಾರದ ಕಂದಾಯ ಇಲಾಖೆಯ ಉಲ್ಲೇಖ-1 ರ ಆದೇಶಗಳ ಮೇರೆಗೆ ಹಾಗೂ ಈ ಕಾರ್ಯಾಲಯದ ಉಲ್ಲೇಖ-2 ರ ಆದೇಶಗಳನ್ವಯ ಹುಬ್ಬಳ್ಳಿ ತಾಲೂಕಾ ಕೊಟಗೊಂಡಹುಣಶಿ ಗ್ರಾಮದ ರಿ.ಸ.ನಂ.186 (20 ಎಕರೆ) ಹಾಗೂ ರಿ.ಸ.ನಂ.183 (13ಎ+10ಎ=23ಎ) ರಲ್ಲಿಯ ಒಟ್ಟು 43 ಎಕರೆ ಕ್ಷೇತ್ರದ ಜಮೀನನ್ನು ಅಧ್ಯಕ್ಷರು ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಆದೇಶದಲ್ಲಿ ನಮೂದಿಸಿರುವಂತೆ ಇತರ ಹಲವು ಷರತ್ತುಗಳೊಂದಿಗೆ ಪ್ರಸ್ತಾಪಿತ ಜಮೀನನ್ನು ಕಬ್ಜಾ ಪಡೆದ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ಮಂಜೂರಾದ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕೆಂದು ಷರತ್ತನ್ನು ವಿಧಿಸಿ ಮಂಜೂರು ಮಾಡಲಾಗಿದೆ. ಸಂಸ್ಥೆಗೆ ಸರಕಾರದಿಂದ ಆಗತ್ಯ 43ಎಕರೆ ಕ್ಷೇತ್ರದ ಜಮೀನನ್ನು ಒದಗಿಸಿ 20 ವರ್ಷಗಳ ಅವಧಿ ಗತಿಸಿದರೂ ಜಮೀನು ಮಂಜೂರಾತಿ ಷರತ್ತುಗಳ ಪ್ರಕಾರ ಉದ್ದೇಶಿತ ಕೆಲಸವನ್ನು ಕೈಕೊಂಡಿರುವದಿಲ್ಲ. ಈ ದಿಶೆಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯು ದಿನಾಂಕ 12-06-2006 ರಂದು ಸಭೆಯನ್ನು ಏರ್ಪಡಿಸಿ, ಸಂಸ್ಥೆಯ ಒಡೆತನದಲ್ಲಿರುವ ಜಮೀನನ್ನು ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಗೆ ಶೈಕ್ಷಣಿಕ ಹಾಗೂ ಆರೋಗ್ಯ ಶಿಕ್ಷಣದ ಉದ್ದೇಶಕ್ಕಾಗಿ ಹಸ್ತಾಂತರಿಸಲು ಗೊತ್ತುವಳಿ ಸ್ವೀಕರಿಸಿರುವುದು. ಅಧ್ಯಕ್ಷರು ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರು ಜಮೀನು ಮಂಜೂರಾತಿ ಷರತ್ತುಗಳನ್ನು ಉಲ್ಲಂಘಿಸಿರುವರು. ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ನೇದ್ದರ ಕಾರ್ಯ ಚಟುವಟಿಕೆಯ ಬಗ್ಗೆ ಹಾಗೂ ಸಂಸ್ಥೆಗೆ ಮಂಜೂರಾಗಿರುವ 43 ಎಕರೆ ಕ್ಷೇತ್ರದ ಜಮೀನನ್ನು ಕೆ.ಎಲ್.ಇ.ಸಂಸ್ಥೆಗೆ ಹಸ್ತಾಂತರಿಸುವ ಬಗ್ಗೆ ಸಹಕಾರ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 25-11-2006 ರಂದು ಸಂಬಂಧಿಸಿದ ಸದಸ್ಯರ ಉಪಸ್ಥಿತಿಯಲ್ಲಿ ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರ ಒಡೆತನದ 43 ಎಕರೆ ಕ್ಷೇತ್ರದ ಜಮೀನನ್ನು ವಿಲೇವಾರಿ ಮಂಜೂರಾತಿಗಾಗಿ ಪ್ರಸ್ತಾವವನ್ನು ಕಂದಾಯ ಇಲಾಖೆಗೆ ಸಲ್ಲಿಸಿ ನಿಯಮಗಳಿಗನುಸಾರ ಕ್ರಮ ಕೈಕೊಳ್ಳಲು ತೀರ್ಮಾನಿಸಿ ಗೊತ್ತುವಳಿ ಸ್ವೀಕರಿಸಲಾಗಿದೆ. ಈ ದಿಶೆಯಲ್ಲಿ ಕೆ.ಎಲ್.ಇ.ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ. ಪ್ರಭಾಕರ ಕೋರೆ ಎಂ.ಎಲ್.ಸಿ. ಇವರು ಹುಬ್ಬಳ್ಳಿಯ ಕೊಟಗೊಂಡಹುಣಶಿಯ ರಿ.ಸ.ನಂ.183 ಹಾಗೂ 186 ರಲ್ಲಿಯ 43 ಎಕರೆ ಕ್ಷೇತ್ರದ ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರ ಒಡೆತನದ ಜಮೀನನ್ನು ಶೈಕ್ಷಣಿಕ ಹಾಗೂ ಆರೋಗ್ಯ ಶಿಕ್ಷಣ ಉದ್ದೇಶಕ್ಕಾಗಿ ಮಂಜೂರು ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರಕಾರ ಬೆಂಗಳೂರು ಇವರನ್ನು ದಿನಾಂಕ 01-02-2007 ನೇದ್ದರ ಮನವಿಯ ಮುಖಾಂತರ ಕೋರಿರುವರು. ಪ್ರಸ್ತಾಪಿತ ಜಮೀನು ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರ ಒಡೆತನದಲ್ಲಿರುವುದಾಗಿ ಪಹಣಿ ಪತ್ರಿಕೆ ಪರಿಶೀಲನೆಯಿಂದ ತಿಳಿದು ಬರುವದು.

DEPUTY COMMISSIONER DHARWAR

ಈ ದಿಶೆಯಲ್ಲಿ ಹುಬ್ಬಳ್ಳಿಯ ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಒಡೆತನದ ಜಮೀನನ್ನು ಮಂಜೂರಾತಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳ ಪ್ರಕಾರ ಎರಡು ವರ್ಷಗಳ ಒಳಗಾಗಿ ನೂಲಿನ ಗಿರಣಿ ಸ್ಥಾಪನೆಯ ಚಟುವಟಿಕೆಗಳನ್ನು

ಕಾರ್ಯಾರಂಭ ಮಾಡಬೇಕಾಗಿದ್ದು, 20 ವರ್ಷಗಳ ಕಾಲಾವಧಿ ಗತಿಸಿದರೂ ಆರಂಭಿಸದೇ ಜಮೀನು ಮಂಜೂರಾತಿ ಷರತ್ತುಗಳನ್ನು ಉಲ್ಲಂಘಿಸಿರುವ ಅಂಶವನ್ನು ಹಾಗೂ ಸರಕಾರದ ಸಹಕಾರ ಇಲಾಖೆಯ ಕಾರ್ಯದರ್ಶಿಗಳ ಮಟ್ಟದಲ್ಲಿ ಸಭೆ ಜರುಗಿ ತೆಗೆದುಕೊಂಡ ನಿರ್ಣಯದ ಪ್ರಕಾರ ಈ ಕಾರ್ಯಾಲಯದ ದಿನಾಂಕ 12-04-2007 ನೇದ್ದರ ಪತ್ರದ ಪ್ರಕಾರ ಸರಕಾರದ ಕಂದಾಯ ಇಲಾಖೆಗೆ ವಿವರವಾದ ವರದಿಯನ್ನು ಸಲ್ಲಿಸಲಾಗಿದೆ.

ಸರಕಾರವು ಪ್ರಸ್ತಾವವನ್ನು ಪರಿಶೀಲಿಸಿ, ಮೇಲೆ ಓದಿದ ಅ.ನಂ.5 ನೇದ್ದರ ಪತ್ರದ ಮೇರೆಗೆ ಅನುಕ್ರಮವಾಗಿ ಸರಕಾರದಿಂದ ಹಾಗೂ ಈ ಕಾರ್ಯಾಲಯದ ದಿನಾಂಕ 12-01-1988 ರ ಪ್ರಕಾರ, ಸಂಜಯ ಸಹಕಾರಿ ನೂಲಿ ಗಿರಣಿ ನಿಯಮಿತ ಹುಬ್ಬಳ್ಳಿ ಇವರಿಗೆ ಮಂಜೂರಾದ 43 ಎಕರೆ ಕ್ಷೇತ್ರದ ಜಮೀನನ್ನು 1983-84 ರಿಂದ ಕಾರ್ಯಾರಂಭ ಮಾಡದೇ ಇರುವ ಕಾರಣಗಳಿಂದಾಗಿ ಪೂರ್ಣ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ಪಡೆದು ಹುಬ್ಬಳ್ಳಿ ತಾಲೂಕಾ ಕೊಟಗೊಂಡಹುಣಸಿ ಗ್ರಾಮದ ರಿ.ಸ.ನಂ. 183 ಹಾಗೂ 186 ರಲ್ಲಿನ 43 ಎಕರೆ ಜಮೀನಿನ ಪೈಕಿ 34 ಎಕರೆ ಕ್ಷೇತ್ರದ ಜಮೀನನ್ನು ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಗೆ ಶೈಕ್ಷಣಿಕ ಹಾಗೂ ಆರೋಗ್ಯ ಶಿಕ್ಷಣ ಉದ್ದೇಶಕ್ಕಾಗಿ ಪ್ರಸ್ತುತ ಮಾರುಕಟ್ಟೆ ಬೆಲೆ ಹಾಗೂ ಇನ್ನಿತರ ಶುಲ್ಕಗಳನ್ನು ವಿಧಿಸಿ ಕ.ಭೂ.ಮಂ. ನಿಯಮಾವಳಿಗಳು 1969 ಉಪನಿಯಮ 27 ರಂತೆ ಸರಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭೂ ಮಂಜೂರಾತಿ ಮಾಡಲು ಪೂರ್ವಾನುಮೋದನೆ ನೀಡಿದ್ದು ಈ ದಿಶೆಯಲ್ಲಿ ಇನ್ನುಳಿದ 9 ಎಕರೆ ಕ್ಷೇತ್ರದ ಜಮೀನನ್ನು ಅದರಗುಂಚಿ ಪಂಚಾಯತ ವ್ಯಾಪ್ತಿಯಲ್ಲಿನ ಗ್ರಾಮಗಳ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲು ಹಾಗೂ ಈ ಜಮೀನನ್ನು ಯಾವುದೇ ಖಾಸಗಿ ಸಂಸ್ಥೆಗೆ ನೀಡಲು ಪರಿಗಣಿಸಬಾರದೆಂಬ ಷರತ್ತು ವಿಧಿಸಿ ಉಳಿಸಿಕೊಳ್ಳಲು ನಿರ್ದೇಶಿಸಿರುವುದು. ಸರಕಾರದ ಪೂರ್ವಾನುಮೋದನೆಯನ್ನು ಪರಿಗಣಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**ಆ ದೇ ಶ**

ಪ್ರಸ್ತಾವನೆಯಲ್ಲಿ ವಿವರಿಸಿದ ಸಂದರ್ಭಗಳ ಮೇರೆಗೆ ಹುಬ್ಬಳ್ಳಿ ತಾಲೂಕಾ ಕೊಟಗೊಂಡಹುಣಸಿ ಗ್ರಾಮದ ರಿ.ಸ.ನಂ.183 ಹಾಗೂ 186 ರಲ್ಲಿಯ 43 ಎಕರೆ ಕ್ಷೇತ್ರದ ಜಮೀನನ್ನು ಮೇಲೆ ಓದಲಾದ ಅ.ನಂ.1 ಹಾಗೂ 2 ರ ಮೇರೆಗೆ ಅಧ್ಯಕ್ಷರು ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರಿಗೆ ಮಂಜೂರು ಮಾಡಲಾಗಿರುವ ಆದೇಶಗಳನ್ನು ನೂಲಿನ ಗಿರಣಿಯವರು 1983-84 ರಿಂದ ಇಲ್ಲಿಯವರೆಗೂ ಕಾರ್ಯಾರಂಭ ಮಾಡದೇ ಇರುವ ಕಾರಣಗಳಿಂದಾಗಿ, ಪೂರ್ಣ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ಪಡೆದು ಈ ದಿಶೆಯಲ್ಲಿ 43 ಎಕರೆ ಕ್ಷೇತ್ರದ ಜಮೀನಿನ ಪೈಕಿ 34 ಎಕರೆ ಕ್ಷೇತ್ರದ ಜಮೀನನ್ನು ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಗೆ ಶೈಕ್ಷಣಿಕ ಹಾಗೂ ಆರೋಗ್ಯ ಶಿಕ್ಷಣ ಉದ್ದೇಶಕ್ಕಾಗಿ ಕೆಳಗೆ ನಮೂದಿಸಿದ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಿ ಆದೇಶಿಸಿದೆ. ಪ್ರಸ್ತುತ ಸರ್ವೆ ನಂಬರುಗಳಲ್ಲಿ ಉಳಿದಿರುವ 9 ಎಕರೆ ಜಮೀನನ್ನು ಅದರಗುಂಚಿ ಪಂಚಾಯತ ವ್ಯಾಪ್ತಿಯಲ್ಲಿನ ಗ್ರಾಮಗಳ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲು ಹಾಗೂ ಯಾವುದೇ ಖಾಸಗಿ ಸಂಸ್ಥೆಗೆ ನೀಡಲು ಪರಿಗಣಿಸಬಾರದಾಗಿ ಷರತ್ತಿನೊಂದಿಗೆ ಉಳಿಸಿಕೊಳ್ಳಲು ಆದೇಶಿಸಿದೆ.

**ಷರತ್ತುಗಳು :-**

1. ಜಮೀನು ಮಂಜೂರಾತಿ ಪಡೆದ ಅರ್ಜಿದಾರ ಸಂಸ್ಥೆಯು ಪ್ರತಿ ಎಕರೆಗೆ ರೂ. 2.00 ಲಕ್ಷಗಳಂತೆ 68.00 ಲಕ್ಷ ರೂ. ಗಳ ಮಾರುಕಟ್ಟೆ ಬೆಲೆಯನ್ನು ಎರಡು ತಿಂಗಳುಗಳ ಒಳಗಾಗಿ ಸರಕಾರಕ್ಕೆ ಭರಣಾ ಮಾಡಿದ ಚಲನ್ ಪ್ರತಿಯನ್ನು ತಹಶೀಲ್ದಾರ ಹುಬ್ಬಳ್ಳಿ ಇವರಲ್ಲಿ ಹಾಜರು ಪಡಿಸಬೇಕು.
2. ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರು ಸರಕಾರಕ್ಕೆ/ಶೇರುದಾರರಿಗೆ ಇಲ್ಲವೇ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ವ್ಯಾಜ್ಯಗಳಿಂದ ತೀರ್ಮಾನವಾಗುವ ನಿರ್ಧಾರಗಳಿಂದ ಅಥವಾ ಇತರ ಯಾವುದೇ ಪ್ರಸಂಗಳಲ್ಲಿ ನೀಡಬೇಕಾಗಿರುವ ಹಣಕಾಸಿನ ವ್ಯವಹಾರಗಳ ಸಂದಾಯಕ್ಕೆ ಸಂಸ್ಥೆಯು ಬಾಧ್ಯಸ್ಥರಾಗಿರಬೇಕು.
3. ಮಂಜೂರು ಮಾಡಿರುವ ಜಮೀನನ್ನು ಕಬ್ಜೆ ಪಡೆದ ದಿನಾಂಕದಿಂದ ಮೂರು ವರ್ಷಗಳ ಒಳಗಾಗಿ ಮಂಜೂರಾದ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬೇಕು. ಹಾಗೂ ಅನುಮೋದಿತ ಯೋಜನಾ ನಕ್ಷೆಯ ಪ್ರಕಾರ ಕಾಮಗಾರಿಗಳನ್ನು ಕೈಕೊಳ್ಳಬೇಕು.
4. ಮಂಜೂರಾತಿ ಮಾಡಿರುವ ಜಮೀನನ್ನು 15 ವರ್ಷಗಳವರೆಗೆ ಪರಭಾರೆ ಮಾಡಕೂಡದು. ಪರಭಾರೆ ಮಾಡಬೇಕೆನಿಸಿದಾಗ ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಮಾಡಬಾರದು. (ನಿಯಮ-9)
5. ಅರ್ಜಿದಾರ ಸಂಸ್ಥೆಗೆ ಮಂಜೂರು ಮಾಡಿದ ಜಮೀನನ್ನು ಅಧಿಕಾರ ವ್ಯಾಪ್ತಿ ಹೊಂದಿರುವ ಸ್ಥಾನಿಕ ಪ್ರಾಧಿಕಾರಗಳ ಕಾಯ್ದೆ-ಕಾನೂನಿಗೆ ಒಳಪಟ್ಟು ನಿಯಮಾನುಸಾರ ಉಪಯೋಗಿಸಬೇಕು. (ನಿಯಮ-18-ಕ)

THE DEPUTY COMMISSIONER DHARWAR

6. ಮಂಜೂರಾದ ಜಮೀನಿನ ಕಬ್ಜೆಯನ್ನು ಅರ್ಜಿದಾರ ಸಂಸ್ಥೆಯು ಮೂರು ತಿಂಗಳುಗಳ ಒಳಗಾಗಿ ಪಡೆಯಬೇಕು. ಜಮೀನಿಗೆ ತಂತಿ ಬೇಲಿ ನಿರ್ಮಿಸಿಕೊಂಡು ಅತೀಕ್ರಮಣವಾಗದಂತೆ ತಮ್ಮ ಸುಪರ್ಧಿಯಲ್ಲಿ ಇರಿಸಿಕೊಳ್ಳಬೇಕು. ಅತೀಕ್ರಮಣಗೊಂಡಲ್ಲಿ ಸರಕಾರವು ಯಾವುದೇ ರೀತಿಯಿಂದ ಹೊಣೆ ಆಗಲಾರದು.
7. ಸರಕಾರದಿಂದ ಕಾಲ ಕಾಲಕ್ಕೆ ನೀಡುವ ನಿರ್ದೇಶನಗಳನ್ನು ಅನುಲಕ್ಷಿಸಿ ಷರತ್ತುಗಳ ಮಾರ್ಪಾಡು/ಸೇರ್ಪಡೆ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುವರು. ಮಂಜೂರಾದ ಜಮೀನು ಪುನಃ ಸರಕಾರಕ್ಕೆ ಬೇಕಾದಲ್ಲಿ ಮರಳಿ ಪಡೆಯುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುವರು. ಈ ಕುರಿತು ಯಾವುದೇ ಪರಿಹಾರಧನವನ್ನು ನೀಡಲಾಗುವುದಿಲ್ಲ.
8. ಮಂಜೂರಾತಿದಾರರು ಮೇಲೆ ನಮೂದಿಸಿದ ಎಲ್ಲ ಕರಾರುಗಳನ್ನು ಒಪ್ಪಿರುವ ಬಗ್ಗೆ ನಿಯಮ 28 (2) ರ ಮೇರೆಗೆ ನಮೂನೆ-೮ ರಲ್ಲಿ ತಹಶೀಲ್ದಾರರ ಸಮಕ್ಷಮ ಒಪ್ಪಿಗೆ ಪತ್ರವನ್ನು ಈ ಆದೇಶದ ದಿನಾಂಕದಿಂದ ಎರಡು ತಿಂಗಳುಗಳ ಒಳಗಾಗಿ ಬರೆದು ಸಲ್ಲಿಸಬೇಕು.
9. ಮಂಜೂರಾತಿದಾರರು ಮಂಜೂರಾದ ಜಮೀನಿನ ಮೇರೆಗಳನ್ನು ಗುರುತಿಸಿಕೊಂಡು ತಹಶೀಲ್ದಾರರಿಂದ ಕಬ್ಜೆಯನ್ನು ಪಡೆಯಬೇಕು.
10. ಮೇಲೆ ನಮೂದಿಸಿರುವಂತೆ ಎಲ್ಲ ವಿಧಿ ವಿಧಾನಗಳನ್ನು ಅನುಸರಿಸಿ ತಹಶೀಲ್ದಾರರು ಪಹಣಿ ಪತ್ರಿಕೆಯಲ್ಲಿ ಆದೇಶಗಳಿಗನುಸಾರ ಮಂಜೂರಾತಿದಾರರ ಹೆಸರನ್ನು ನಮೂದಿಸುವ ಕ್ರಮ ಜರುಗಿಸಬೇಕು.
11. ಮೇಲೆ ನಮೂದಿಸಿದ ಯಾವುದೇ ಕರಾರನ್ನು ಉಲ್ಲಂಘಿಸಿದಲ್ಲಿ ಯಾವುದೇ ಪರಿಹಾರ ನೀಡದೇಯೇ ಜಮೀನು ಮಂಜೂರಾತಿಯನ್ನು ರದ್ದು ಪಡಿಸಿ ಜಮೀನನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು.

ಪ್ರಸ್ತುತ ಆದೇಶದ ದಿನಾಂಕದಿಂದ ಕೊಟಗೊಂಡಹುಣಶಿ ಗ್ರಾಮದ ರಿ.ಸ.ನಂ. 183 ಹಾಗೂ 186 ರಲ್ಲಿಯ 43 ಎಕರೆ ಜಮೀನಿಗೆ ಸಂಬಂಧಿಸಿದಂತೆ ಅಧ್ಯಕ್ಷರು ಸಂಜಯ ಸಹಕಾರಿ ನೂಲಿನ ಗಿರಣಿ ನಿಯಮಿತ ಹುಬ್ಬಳ್ಳಿ ಇವರು ತಮ್ಮ ಹಕ್ಕನ್ನು ಕಳೆದುಕೊಂಡಿರುವರು.

ಸಹಿ ಅಗಿದೆ.

**ಜಿಲ್ಲಾಧಿಕಾರಿಗಳು ಧಾರವಾಡ ಜಿಲ್ಲೆ,**

**ಧಾರವಾಡ**

**ಪ್ರತಿಗಳು:-**

1. ಪ್ರಧಾನ ಕಾರ್ಯದರ್ಶಿಗಳು ಕರ್ನಾಟಕ ಸರಕಾರ ಕಂದಾಯ ಇಲಾಖೆ (ಭೂ.ಮಂ) ಬಹು ಮಹಡಿಗಳ ಕಟ್ಟಡ ಡಾ॥ ಅಂಬೇಡ್ಕರ ವೀಧಿ ಬೆಂಗಳೂರು-560001 (ಗೌರವಾದರಗಳೊಂದಿಗೆ)
2. ಸರಕಾರದ ಸಹಕಾರ ಇಲಾಖೆಯ ಕಾರ್ಯದರ್ಶಿಗಳು ಕರ್ನಾಟಕ ಸರಕಾರ ಅಂಬೇಡ್ಕರ ವೀಧಿ ಬೆಂಗಳೂರು-560001 (ಗೌರವಾದರಗಳೊಂದಿಗೆ)
3. ಪ್ರಾದೇಶಿಕ ಆಯುಕ್ತರು ಬೆಳಗಾವಿ ಕಂದಾಯ ವಿಭಾಗ ಬೆಳಗಾವಿ (ಗೌರವಾದರಗಳೊಂದಿಗೆ)
4. ಸಹಕಾರ ಸಂಘಗಳ ಉಪನಿಬಂಧಕರು ಧಾರವಾಡ
5. ಉಪವಿಭಾಗಾಧಿಕಾರಿಗಳು ಕಂದಾಯ ಉಪವಿಭಾಗ ಧಾರವಾಡ
6. ತಹಶೀಲ್ದಾರ ಹುಬ್ಬಳ್ಳಿ (ಸೂಕ್ತ ಕ್ರಮ ಕುರಿತು)

   2. ಮಂಜೂರಾತಿದಾರರಿಂದ ಜಮೀನಿನ ಮಾರುಕಟ್ಟೆ ಬೆಲೆ ಹಾಗೂ ಇತರ ಶುಲ್ಕಗಳನ್ನು ಚಲನ್ ಮುಖಾಂತರ ಭರಣಾ ಮಾಡಿಸಿಕೊಂಡು ಜಮೀನಿನ ಕಬ್ಜೆಯನ್ನು ವಹಿಸಬೇಕು. ಮತ್ತು ಚಲನ್ ನಕಲು ಪ್ರತಿಗಳನ್ನು ಈ ಕಚೇರಿಗೆ ಹಾಜರು ಪಡಿಸಬೇಕು.

7. ಕಾರ್ಯಾಧ್ಯಕ್ಷರು ಕೆ.ಎಲ್.ಇ.ಸಂಸ್ಥೆ ಲಿಂಗರಾಜ ರೋಡ ಬೆಳಗಾವಿ.
8. ಅಧ್ಯಕ್ಷರು ಸಂಜಯ ಸಹಕಾರಿ ನೂಲಿ ಗಿರಣಿ ನಿಯಮಿತ, ನ್ಯೂ ಕಾಟನ್ ಮಾರ್ಕೆಟ್ ಹುಬ್ಬಳ್ಳಿ
9. ಎಲ್.ಎನ್.ಡಿ. / ಹೆಚ್.ಎಫ್. ಕಡತಕ್ಕೆ.
10. ಹೆಚ್ಚಿನ ಪ್ರತಿ.

THE DEPUTY COMMISSIONER DHARWAD

**ಜಿಲ್ಲಾಧಿಕಾರಿಗಳು ಧಾರವಾಡ**
**ಇವರ ಪರವಾಗಿ.**

D:\My Document\A.N.KHUDAVAND\M.I.HOSAMANI\LAG.CR.2006.07 LETTER FILE\LGL.CR.80.00.01.ORDER.doc